**ದಿಃ09.01.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಕೆ.ಎಸ್.ಆರ್ ವಕೀಲರಿಂದ ಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರರ ಪರ ಸಾಕ್ಷಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಒಕ್ಕಣೆಯನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸತ್ಯದಿಂದ ಕೂಡಿದೆ ಎಂದು ಮತ್ತು ಅದರಲ್ಲಿ ಇರುವ ಸಹಿ ನನ್ನದಾಗಿರುತ್ತದೆ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ ಃ**

ಅಪಘಾತ ಕಾಲಕ್ಕೆ ನಾನು ಮಿಥಾಲಿ ಬ್ಲ್ಯೂ ಹೋಟೇಲಿನ ಬಲಬದಿಯಲ್ಲಿ ಇರುವ ಅಗಂಡಿಯಲ್ಲಿ ಇದ್ದೆ. ನಾನು ಇದ್ದ ಅಂಗಡಿಯ ಹೆಸರು ನೆನಪಿಲ್ಲ. ಆದರೆ ಅದು ಅಂಗಡಿ ಮಸಾಲೆ ಪದಾರ್ಥ ಮಾರಾಟ ಮಾಡುವ ಅಂಗಡಿಯಾಗಿತ್ತು. ನಾನು ಇದ್ದ ಅಂಗಡಿ ಮಿಥಾಲಿ ಬ್ಲ್ಯೂ ಹೋಟೇಲಿನಿಂದ ಸುಮಾರು 5 ಅಡಿ ದೂರದಲ್ಲಿ ಇದೆ. ನಾನು ಇದ್ದ ಅಂಗಡಿ ಮತ್ತು ಮಿಥಾಲಿ ಬ್ಲ್ಯೂ ಹೋಟೇಲ್ ನಡುವೆ ಮತ್ತೊಂದು ಹೋಟೇಲ್ ಇದೆ. ಮಿಥಾಲಿ ಬ್ಲ್ಯೂ ಹೋಟೇಲಿನಿಂದ ನಾನು ಇದ್ದ ಜಾಗ ಸುಮಾರು 50 ಅಡಿ ದೂರದಲ್ಲಿ ಇದೆ ಎಂದರೆ ಸರಿಯಲ್ಲ. ನಾನು ಇದ್ದ ಅಂಗಡಿ ಮತ್ತು ಮಿಥಾಲಿ ಬ್ಲ್ಯೂ ಹೋಟೇಲ್ ನಡುವೆ ಇದ್ದ ಹೋಟೇಲಿನ ವಿಸ್ತೀರ್ಣ ಗೊತ್ತಿಲ್ಲ. ನಾನು ಇದ್ದ ಅಂಗಡಿಯಿಂದ ಮಿಥಾಲಿ ಬ್ಲ್ಯೂ ಹೋಟೇಲ್ 5 ಅಡಿ ದೂರದಲ್ಲಿ ಇದೆ

ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಿಥಾಲಿ ಬ್ಲ್ಯೂ ಹೊಟೇಲ್ ಎದುರಿಗೆ ಇರುವ ರಸ್ತೆ ಕುಶಾಲನಗರ ಮಡಿಕೇರಿ ರಸ್ತೆ ಆಗಿರುತ್ತದೆ. ಕುಶಾಲನಗರ ಮಡಿಕೇರಿ ರಸ್ತೆ ಪೂರ್ವ ಪಶ್ಚಿಮ ಅಭಿಮುಖವಾಗಿದೆ ಎಂದರೆ ಸರಿ. ಸದರಿ ರಸ್ತೆಯ ಉತ್ತರಕ್ಕೆ ಮಿಥಾಲಿ ಬ್ಲ್ಯೂ ಹೊಟೇಲ್ ಇದೆ ಎಂದರೆ ಸಾಕ್ಷಿ ಕುಶಾಲನಗರದಿಂದ ಮಡಿಕೇರಿಗೆ ಬರುವ ರಸ್ತೆ ಬಲಬದಿಗೆ ಇದೆ ಎನ್ನುತ್ತಾರೆ. ಮೃತ ತಮ್ಮಯ್ಯ ಇವರು ಸುಂಟಿಕೊಪ್ಪ ಕಡೆಯಿಂದ ಬಸ್ ನಲ್ಲಿ ಬಂದು ಅಪಘಾತ ಸ್ಥಳದಲ್ಲಿ ಇಳಿದು ರಸ್ತೆಯ ಎಡಬದಿಯಲ್ಲಿ ಇರುವ ಅವರ ಮನೆ ಕಡೆ ಹೋಗುತ್ತಿದ್ದರು. ರಸ್ತೆ ಮಧ್ಯದಲ್ಲಿ ಬಿಳಿ ಪಟ್ಟಿ ಇದೆ ಎಂದರೆ ಸರಿ. ಸುಂಟಿಕೊಪ್ಪದಿಂದ ಮಡಿಕೇರಿ ಕಡೆ ಬರುವ ರಸ್ತೆಯ ಪಥ ಬಿಳಿ ಪಟ್ಟೆ ಯಿಂದ ಎಡಬದಿಗೆ ಇದೆ ಎಂದರೆ ಸರಿ. ರಸ್ತೆಯ ಎಡಬದಿಯಲ್ಲಿ ಇಳಿದು ರಸ್ತೆಯ ಎಡಬದಿಯಲ್ಲಿ ಇದ್ದ ಮನೆಗೆ ಮೃತ ತಮ್ಮಯ್ಯ ಹೋಗಬೇಕಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಅಪಘಾತ ಕಾಲಕ್ಕೆ ಮೃತ ತಮ್ಮಯ್ಯ ಇವರು ಫುಟ್ ಬಾತ್ ನಲ್ಲಿ ಹೋಗುತ್ತಿದ್ದರು ಎನ್ನುತ್ತಾರೆ. ಮೃತ ತಮ್ಮಯ್ಯ ಇವರು ರಸ್ತೆ ಎಡಬದಿಯಲ್ಲಿ ಇಳಿದು ರಸ್ತೆಯ ಎಡಬದಿಯಲ್ಲಿ ಇದ್ದ ಅವರ ಮನೆಗೆ ಹೋಗಲು ರಸ್ತೆ ಮಧ್ಯೆ ಬರುವ ಪ್ರಮೇಯ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಪಘಾತ ಕಾಲಕ್ಕೆ ಅವರು ಫುಟ್ ಬಾತ್ ನಲ್ಲಿ ಹೋಗುತ್ತಿದ್ದರು ಎನ್ನುತ್ತಾರೆ. ಅಪಘಾತ ಪೂರ್ವದಲ್ಲಿ ಮೃತ ತಮ್ಮಯ್ಯ ನನಗೆ 2 ವರ್ಷಗಳಿಂದ ಪರಿಚಯ ಇದ್ದರು. ಸಾಕ್ಷಿ ಮುಂದುವರೆದು ನಾನು ಗೂಡ್ಸ್ ವಾಹನ ಚಾಲನೆ ಮಾಡುತ್ತಿದ್ದೂ ಅವರ ಎಸ್ಟೇಟ್ ಗೆ ಬಾಡಿಗೆ ಹೋಗುತ್ತಿದ್ದೆ ಎನ್ನುತ್ತಾರೆ. ತಮ್ಮಯ್ಯ ಇವರು ನನಗೆ ಪರಿಚಯ ಇದಿದ್ದರಿಂದ ಅವರ ಪತ್ನಿ ನನ್ನ ಬಳಿ ಈ ರೀತಿ ಸಾಕ್ಷಿ

ನುಡಿಯುವಂತೆ ಕೇಳಿಕೊಂಡಿದ್ದರಿಂದ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ನಾನು ಅಪಘಾತವನ್ನು ಖುದ್ದು ನೋಡಿಲ್ಲ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಅಪಘಾತ ಸ್ಥಳದಲ್ಲಿ ಇದ್ದು ಅಪಘಾತವನ್ನು ಖುದ್ದು ನೋಡಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆ ಎನ್ನುತ್ತಾರೆ. ನಾನು ಮೃತ ತಮ್ಮಯ್ಯಇವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತ ಸಂಬಂಧ ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ.ಬಿ.ಎಂ.ಎಸ್ ವಕೀಲರಿಂದ ಃ**

2ನೇ ಎದುರುದಾರರ ಪರ ಮಾಡಲಾಗದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.